ಸಾಕ್ಷಿಯನ್ನು ದಿಃ 19.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ</u>**

13. ಆರೋಪಿ ಮತ್ತು ನನ್ನ ಮಗಳ ಮದುವೆಯು ನಮ್ಮ ಊರ ಪಕ್ಕ ಇರುವ ಓಂಕಾರಪ್ಪ ದೇವಸ್ಥಾನದಲ್ಲಿ ಆಗಿರುತ್ತದೆ. ನಾನು ಮತ್ತು ನನ್ನ ಅಳಿಯ ವಿಶ್ವಾಸದಲ್ಲಿ ಇದ್ದೆವು. ನನ್ನ ಅಳಿಯ ನನ್ನ ಮಗಳು ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ನನ್ನ ಅಳಿಯನ ಬಗ್ಗೆ ನನ್ನ ಮಗಳು ಯಾವುದೇ ದೂರು ಹೇಳಿಲ್ಲ. ಆದರೆ ನನ್ನ ಹಿರಿಯ ಮಗಳ ಜೊತೆ ಹೇಳಿರುತ್ತಾಳೆ. ನಾನು ಮತ್ತು ನನ್ನ ಅಳಿಯ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಿದ್ದೆವು.

14. ಸ್ಕ್ಯಾನಿಂಗ್ ಗೆ ನನ್ನ ಮಗಳನ್ನು ನಾನೇ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದೆನು ಎಂದರೆ ಸರಿ. ಆದರೆ ನನ್ನ ಅಳಿಯ ನಾನು ಕೆಲಸಕ್ಕೆ ರಜೆ ಹಾಕಿದ್ದೇನೆ , ಅವಳನ್ನು ನಾನೇ ಕರೆದುಕೊಂಡು ಹೋಗುತ್ತೇನೆ ಹಾಗೂ ನಿಮ್ಮ ತಂದೆ ದನ ಮೇಯಿಸಲು ಹೋಗಲಿ ಎಂಬುದಾಗಿ ತಿಳಿಸಿರುತ್ತಾನೆ. ಈಗ ಹೇಳುತ್ತೇನೆ , ನಾನು ನನ್ನ ಗಂಡನ ಜೊತೆ ಸ್ಕ್ಯಾನಿಂಗ್ ಗೆ ಹೋಗುತ್ತೇನೆ , ನೀನು ದನ ಮೇಯಿಸಲು ಹೋಗು ಎಂಬುದಾಗಿ ನನ್ನ ಮಗಳೇ ತಿಳಿಸಿರುತ್ತಾಳೆ.

15. ಆ ದಿನ ನನಗೆ ರೈಲ್ವೇ ಸ್ಟೇಷನ್ ನಿಂದ ಫೋನ್ ಮಾಡಿದವರು ಹೆಸರು ಮತ್ತು ಊರು ಗೊತ್ತಿಲ್ಲ. ನಾನು ವಾಪಸ್ ಅವರ ಫೋನ್ ಗೆ ಕರೆ ಮಾಡಿ ಮಾತನಾಡಿದಾಗಲೂ ಅವರ ಹೆಸರು ಮತ್ತು ಊರನ್ನು ತಿಳಿದುಕೊಂಡಿರುವುದಿಲ್ಲ. ಆ ರೀತಿಯಾಗಿ ನಾನು ತಿಳಿದುಕೊಳ್ಳಲು ತೊಂದರೆ ಏನೂ ಇರಲಿಲ್ಲ. ಅವರ ಫೋನ್ ನಂಬರ್ ನ್ನು ನಾನು ಪೊಲೀಸರ ಬಳಿ ಹೇಳಿರುವುದಿಲ್ಲ.

16. ನನ್ನ ಮಗಳು ದೈವಭಕ್ತೆ , ಪೂಜೆ ಪುನಸ್ಕಾರ ಮಾಡುತ್ತಿದ್ದಳು. ದಿನನಿತ್ಯ ಸ್ನಾನ ಪೂಜೆ ಪುನಸ್ಕಾರಗಳನ್ನು ಮಾಡುತ್ತಿದ್ದಳು. ನನ್ನ ಮಗಳಿಗೆ ಗಂಟೆಗೊಂದು ಘಳಿಗೆಗೊಂದು ಜ್ಞಾನ ಇದ್ದು ಏನೇನೋ ಮಾತನಾಡುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದಳು. ನನ್ನ ಮಗಳು ಸಾಯುವುದಕ್ಕಿಂತ 8 ದಿನದ ಮುಂಚೆಯಿಂದ ನಮ್ಮ ಮನೆಯಲ್ಲಿ ಇದ್ದಳು. ನಮ್ಮ ಮನೆಯಿಂದ ಅಳಿಯನನ್ನು ನಾನೇ ಫ್ಯಾಕ್ಟರಿಗೆ ಕರೆದುಕೊಂಡು ಹೋಗಿ ಬರುತ್ತಿದ್ದೆನು. ನಮ್ಮ ಮನೆಯಲ್ಲಿ ಇದ್ದಾಗ ಅಳಿಯ , ಮಗಳು , ಮಕ್ಕಳು ಚೆನ್ನಾಗಿದ್ದರು. ಸಂಬಳ ಆದಾಗ ನನ್ನ ಮಗಳು ಮತ್ತು ಮಕ್ಕಳಿಗೆ ಹಣ್ಣು ಬಿಸ್ಕೇಟ್ ನ್ನು ನನ್ನ ಅಳಿಯ ತಂದು ಕೊಡುತ್ತಿದ್ದನು.

17. ನಿಮ್ಮ ಮನೆಯಲ್ಲಿ ಇದ್ದಾಗ ಅವರ ನಡುವೆ ಯಾವುದೇ ಸಮಸ್ಯೆಗಳು ಇರಲಿಲ್ಲ ಎನ್ನುವುದಕ್ಕೆ ಒಳಗೊಳಗೆ ಸಮಸ್ಯೆಗಳು ಇದ್ದವು ಎಂಬುದಾಗಿ ಸಾಕ್ಷಿ ಹೇಳುತ್ತಾರೆ. ನನ್ನ ಮಗಳಿಗೆ ಸಾಯಬೇಕು ಎಂಬುದಾಗಿ ಮನೋವ್ಯಥೆ ಇತ್ತು ಎಂದರೆ ಸರಿಯಲ್ಲ. ಚಿಕ್ಕದೇವಿ , ನನ್ನ ಮಗಳು ಓದಿರುವುದಿಲ್ಲ. ನನ್ನ ಅಳಿಯ ತೊಂದರೆ ಕೊಡುತ್ತಿದ್ದ ಬಗ್ಗೆ ನನ್ನ ಜೊತೆಯಾಗಲೀ ನನ್ನ ಹೆಂಡತಿ ಜೊತೆಯಾಗಲೀ ಹೇಳಿರುವುದಿಲ್ಲ , ಕಾರಣ ನನ್ನ ಜೊತೆ ಹೇಳಿದರೆ ಜಗಳವಾಡುತ್ತೇನೆ ಎಂಬುದಾಗಿ ಆ ವಿಚಾರವನ್ನು ಆಕೆ ನನ್ನ ಜೊತೆಯಲ್ಲಿ ಹೇಳಿರುವುದಿಲ್ಲ.

18. ನನ್ನ ಅಳಿಯ ಮತ್ತು ಮಗಳ ನಡುವೆ ಒಳಗೊಳಗೆ ಮನಸ್ತಾಪವಿತ್ತು, ಆ ವಿಚಾರವನ್ನು ನನ್ನ ಅಣ್ಣನ ಮಗ ರಾಜೇಂದ್ರನಿಗೆ ಹಾಗೂ ನನ್ನ ಮೊದಲ ಮಗಳು ಚಿಕ್ಕದೇವಿಗೆ ಹೇಳಿರುತ್ತಾಳೆ ಎಂಬುದಾಗಿ ನಾನು ಹೇಳಿರುವುದು ಕಟ್ಟುಕತೆ ಇರುತ್ತದೆ ಎಂದರೆ ಸರಿಯಲ್ಲ.

19. ರೈಲ್ವೇ ಸ್ಟೇಷನ್ ನಿಂದ ನಮ್ಮ ಹಳ್ಳಿಗೆ 18 ಕಿಲೋಮೀಟರ್ ದೂರವಾಗುತ್ತದೆ. ರೈಲ್ವೇ ಸ್ಟೇಷನ್ ನಿಂದ ಫೋನ್ ಬಂದಾಗ ನನ್ನ ಅಣ್ಣನ ಮಗ ನಮ್ಮ ಮನೆಯಲ್ಲೇ ಇದ್ದರು. ಹೊಳೆಯ ಬಳಿ ಅಯ್ಯಪ್ಪಸ್ವಾಮಿ ದೇವಸ್ಥಾನವು ರಸ್ತೆ ಪಕ್ಕದಲ್ಲಿ ಇರುತ್ತದೆ. ಆ ರಸ್ತೆಯಲ್ಲಿ ವಾಹನಗಳು ಓಡಾಡುತ್ತಿರುತ್ತವೆ. ರಾತ್ರಿ ವೇಳೆ ಆ ದೇವಸ್ಥಾನಕ್ಕೆ ಸುಮಾರು ಜನ ಬರುತ್ತಾರೆ ಎಂದರೆ ಸರಿಯಲ್ಲ. ಆ ರಸ್ತೆಯಲ್ಲಿ ಸುಮಾರು ಜನ ಬಂದು ವಾಕಿಂಗ್ ಮಾಡುತ್ತಾರೆ ಎಂದರೆ ಸರಿಯಲ್ಲ.

20. ನಮ್ಮೂರಿನಿಂದ ನಂಜನಗೂಡಿಗೆ ಬೇಕಾದಷ್ಟು ಬಸ್ ಗಳು ಓಡಾಡುತ್ತವೆ. ನಾನು ಸಾಯಂಕಾಲವಾದರೂ ಫೋನನ್ನು ಮಾಡಿರುವುದಿಲ್ಲ , ಆದರೆ ಅವರಿಂದಲೇ ಫೋನ್ ಬಂದಿರುತ್ತದೆ. ಆಸ್ಪತ್ರೆ ಕೆಲಸ ಬೇಗ ಮುಗಿದರೂ ಸಹ ನನ್ನ ಮಗಳೇ ತಡ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ತನ್ನ ಮಗಳಿಗೆ ಚಾಕಲೇಟನ್ನು ಕೊಡಿಸಿ ಎಂಬುದಾಗಿ

ಗಂಡನನ್ನು ಕಳುಹಿಸಿ ಮಗನನ್ನು ಕರೆದುಕೊಂಡು ನನ್ನ ಮಗಳೇ ಹೊಳೆ ಕಡೆಗೆ ಬಂದಿರುತಾಳೆ ಎಂದರೆ ಸರಿಯಲ್ಲ. ನನ್ನ ಮಗಳೇ ಹೊಳೆಗೆ ಬಿದ್ದು ತೀರಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ಮಗಳ ಮಾನಸಿಕ ಸ್ಥಿತಿ ಸಾಯಬೇಕು ಎಂಬುದಾಗಿ ಇದ್ದುದ್ದರಿಂದ ಅವಳೇ ಸ್ವತಃ ಹೊಳೆಗೆ ಬಿದ್ದು ತೀರಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ಮಗಳೇ ಹೊಳೆಗೆ ಬಿದ್ದು ಸಾವನ್ನಪ್ಪಿದ್ದು ಮಗುವನ್ನು ಬೇರೆಯವರು ಕಾಪಾಡಿರುತ್ತಾರೆ ಎಂದರೆ ಸರಿಯಲ್ಲ.

21. ನನ್ನ ಮಗಳ ಸಾವಿಗೆ ನನ್ನ ಅಳಿಯ ಆರೋಪಿ ಕಾರಣರಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯನ ಕಣ್ಣು ತಪ್ಪಿಸಿ ಆಕೆಯೇ ಹೊಳೆಗೆ ಬಿದ್ದು ಸಾವನ್ನಪ್ಪಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ಮಗಳು ಸತ್ತಿದ್ದಾಳೆ ಅಂತ ಕಿಚ್ಚಿನಿಂದ ನನ್ನ ಅಳಿಯನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

22. ದೂರನ್ನು ನಮ್ಮೂರಿನವರು ಬರೆದಿರುತ್ತಾರೆ. ದೂರು ಎಷ್ಟು ಹಾಳೆಯಲ್ಲಿ ಇದೆ ಅನ್ನುವುದು ಗೊತ್ತಿಲ್ಲ , ಒಂದು ಹಾಳೆಗೆ ಹೆಬ್ಬೆಟ್ಟು ಹಾಕಿದ್ದೇನೆ. ದೂರಿನಲ್ಲಿ ಬರೆದಿರುವ ಒಕ್ಕಣೆಯನ್ನು ನನಗೆ ಓದಿ ಹೇಳಿರುತ್ತಾರೆ. ನಾನು , ನನ್ನ ಮಗ ಯೋಜನೆ ಮಾಡಿ ಉದ್ದೇಶಪೂರ್ವಕವಾಗಿ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

23. ಮಹಜರ್ ಮಾಡುವಾಗ ನಾನು , ಮಹದೇವಯ್ಯ , ಪೊಲೀಸರು , ಗೋಪಾಲಕೃಷ್ಣ ಇದ್ದೆವು. ಮಹದೇವಯ್ಯ ನನಗೆ ನೆಂಟರು ಎಂದರೆ ಸರಿಯಲ್ಲ. ಮಹಜರ್ ಬರೆಯುವಾಗ ಸುಮಾರು ಜನ  ಇದ್ದರು ಎಂದರೆ ಸರಿಯಲ್ಲ. ಮಹಜರ್ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ಮಹಜರ್ ಗೆ ನಾನು ಹೆಬ್ಬೆಟ್ಟು ಸಹಿಯನ್ನು ಸ್ಥಳದಲ್ಲಿ ಮಾಡಿರುವುದಿಲ್ಲ, ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ.

24. ನನ್ನ ಮಗಳ ಸಾವಿಗೆ ಆಕೆಯೇ ಕಾರಣವೇ ಹೊರತು ನನ್ನ ಅಳಿಯನ ಪಾತ್ರವೇನೂ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಃ ಇಲ್ಲ</u>**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

**ಓ ಹೇ ಕೇ ಸ ಇ**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು